ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :–

ಅ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ)—ಇ) ಅನುಬಂಧ 'ಎ' ಮತ್ತು 'ಬಿ' ನಲ್ಲಿ ವಿವರ ನೀಡಲಾಗಿದೆ.

ಈ) ಹೌದು.

ಅನುಬಂಧ—ಬಿ

ಜಿಲ್ಲಾವಾರು ಆಂಗ್ಲ ಮಾಧ್ಯಮ ಪ್ರೌಢಶಾಲೆಗಳ ವಿವರ

ಅ.ನಂ.	ಜಿಲ್ಲೆಗಳ ಹೆಸರು	ಅಧಿಕೃತ	ಅನಧಿಕೃತ
1	2	3	4
1)	ಬೆಂಗಳೂರು ಉತ್ತರ ಜಿಲ್ಲೆ	73	32
2)	ಬೆಂಗಳೂರು ದಕ್ಷಿಣ ಜಿಲ್ಲೆ	20	37
3)	ಬೆಂಗಳೂರು ಗ್ರಾಮಾಂತರ ಜಿಲ್ಲೆ	01	04
4)	ತುಮಕೂರು	08	02
5)	ಚಿತ್ರದುರ್ಗ	04	01
6)	ಶಿವಮೊಗ್ಗ	07	01
7)	ಕೋಲಾರ	23	07
8)	ಮೈಸೂರು	15	07
9)	ಹಾಸನ	02	02
10)	ಚಿಕ್ಕಮಗಳೂರು	05	01
11)	ಮಂಡ್ಯ	05	02
12)	ಬೆಳಗಾಂ	18	04
13)	ಬಳ್ಳಾರಿ	05	02
14)	ಗುಲ್ಬರ್ಗ	09	01
15)	ಬೀದರ್	04	01
16)	ಬಿಜಾಪುರ	08	ಇಲ್ಲ
17)	ಧಾರವಾಡ	13	02
18)	ರಾಯಚೂರು	08	04
19)	ಮಂಗಳೂರು	12	03
20)	ಕೊಡಗು	08	02
21)	ಕಾರವಾರ	08	ಇಲ್ಲ
	ಒಟ್ಟು :	256	115

ವಿಷಯ :– ಸ್ವತಂತ್ರ ಪದವಿ ಪೂರ್ವ ಕಾಲೇಜುಗಳಲ್ಲಿರುವ ಅರೆಕಾಲಿಕ ಉಪನ್ಯಾಸಕರ ಸಂಭಾವನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 621 (793)

ಶ್ರೀ ಬಿ. ಐ. ಪಾಟೀಲ್ (ಉಚ್ಚಗಾಂ) :– ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಸ್ವತಂತ್ರ ಪದವಿ ಪೂರ್ವ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರಿಗೆ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರುಗಳಿಗಿಂತ ಕಡಿಮೆ ಸಂಭಾವನೆ ಪಡೆಯುತ್ತಿದ್ದಾರೆ ಎನ್ನುವ ವಿಚಾರ ನಿಜವೇ ?

ಬಿ) ಹಾಗಿದ್ದರೆ ಅದಕ್ಕೆ ಕಾರಣಗಳೇನು ?

ಸಿ) ಈ ಎರಡು ಮಟ್ಟಗಳಲ್ಲಿನ ಹುದ್ದೆಗಳ ಕೆಲಸದ ಒತ್ತಡ ಹಾಗೂ ವಿದ್ಯಾರ್ಹತೆ ಒಂದೇ ಆಗಿದೆಯೇ?

ಡಿ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ವಿಚಾರದಲ್ಲಿ ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ತಕ್ಷಣ ಕಾರ್ಯಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :–

ಎ) ಹೌದು.

ಬಿ) ಸರ್ಕಾರಿ ಆದೇಶ ಸಂಖ್ಯೆ ಇಡಿ 415 ಡಿಸಿಇ 87 ದಿನಾಂಕ 17–12–88 ನ್ನು ಸ್ವತಂತ್ರ ಪದವಿ-ಪೂರ್ವ ಕಾಲೇಜುಗಳಿಗೆ ವಿಸ್ತರಿಸಿರುವುದಿಲ್ಲ.

ಸಿ) ಹೌದು.

ಡಿ) (ಬಿ) ನಲ್ಲಿ ಕೊಟ್ಟಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ಇ) ಸಧ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ವಿಷಯ :– ಖಾಲಿಯಿರುವ ಮರಾಠಿ ಶಿಕ್ಷಕರ ಹುದ್ದೆಗಳು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 623 (911)

ಶ್ರೀ ಬಿ. ಐ. ಪಾಟೀಲ್ (ಉಚ್ಚಗಾಂ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಬೆಳಗಾಂ ಮತ್ತು ಖಾನಾಪುರ ತಾಲ್ಲೂಕುಗಳ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಮರಾಠಿ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ?

ಬಿ) ಈ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :–

ಎ) ಖಾಲಿಯಿರುವ ಹುದ್ದೆಗಳ ಸಂಖ್ಯೆ : ಬೆಳಗಾಂ ತಾಲ್ಲೂಕು — 24, ಖಾನಾಪುರ ತಾಲ್ಲೂಕು — 22.

ಬಿ) ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವ ಕ್ರಮಕೈಗೊಳ್ಳಲಾಗಿದ್ದು, ಆದಷ್ಟು ಶೀಘ್ರವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ವಿಷಯ :– ಹುಕ್ಕೇರಿ ತಾಲ್ಲೂಕ್ ಯಾದಗೂಡದಲ್ಲಿರುವ ಸರದೇಸಾಯಿ ಸಂಯುಕ್ತ ಪದವಿ ಪೂರ್ವ ಕಾಲೇಜಿಗೆ ಅನುದಾನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 625 (1108)

ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಸರದೇಸಾಯಿ ಸಂಯುಕ್ತ ಪದವಿ ಪೂರ್ವ ಕಾಲೇಜು ಯಾದಗೂಡ, ತಾಲ್ಲೂಕು ಹುಕ್ಕೇರಿ ವೇತನ ಅನುದಾನ ನೀಡಿಲ್ಲವೆಂಬುದು ನಿಜವೇ ?

ಬಿ) ಇಲ್ಲದಿದ್ದಲ್ಲಿ ಯಾವಾಗ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :–

ಎ) ಹೌದು.

ಬಿ) ಸರ್ಕಾರವು ಸಹಮತಿಯನ್ನು ನೀಡಿದೆ. ಆಡಳಿತ ಮಂಡಲಿಯವರಿಂದ ಮುಚ್ಚಳಿಕೆ ಕರಾರು ಒಪ್ಪಂದವನ್ನು ಪಡೆದುಕೊಂಡು ಸರ್ಕಾರವು ಈ ದಿಸೆಯಲ್ಲಿ ಆದೇಶವನ್ನು ಹೊರಡಿಸಲಾಗುವುದು.